# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ 69/2024

**ಸಾಕ್ಷಿಯನ್ನು ದಿಃ 02.09.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಶಿವಲಿಂಗಾಚಾರ್ | ಸಿಡಬ್ಲ್ಯೂಃ 3 | ಪಿಡಬ್ಲ್ಯೂಃ 4 |
| ತಂದೆಯ ಹೆಸರು | ಕಾಳಾಚಾರ್ | | |
| ವಯಸ್ಸು | 49 ವರ್ಷ | | |
| ಕೆಲಸ | ವ್ಯವಸಾಯ | | |
| ವಾಸಸ್ಥಳ | ಎಮ್ಮೆಕೊಪ್ಪಲು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ-1, 2 ಮತ್ತು 4 ಗೊತ್ತು. ಚಾಸಾ-5 ಮತ್ತು 6 ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಸಾಕ್ಷಿ ನಿಪಿ-2ರ ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ)ಎಂದು ಗುರುತಿಸಲಾಯಿತು. ಆರೋಪಿತರು ಮತ್ತು ಚಾಸಾ-1 ರವರ ಮಧ್ಯೆ ಗಲಾಟೆಯಾದ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ.2ಕ್ಕೆ 2023 ನವೆಂಬರ್ ತಿಂಗಳಲ್ಲಿ ಸಹಿ ಹಾಕಿದ್ದೇನೆ. ಸದರಿ ಸಹಿಯನ್ನು ಎಮ್ಮೆಕೊಪ್ಪಲು ಸರ್ಕಲ್ ನಲ್ಲಿ ಹಾಕಿದ್ದೇನೆ. ಪೋಲಿಸರ ಕೋರಿಕೆಯ ಮೇರೆಗೆ ಸದರಿ ಸಹಿ ಹಾಕಿದ್ದೇನೆ. ನಿಪಿ-2 ರಲ್ಲಿ ಬರೆದ ವಿಚಾರಗಳು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

## ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

ದಿಃ 22.11.2023 ರಂದು ಬೀಜನಗಹಳ್ಳಿ ಎಲ್ಲೆಗೆ ಸೇರಿದ ಸರ್ವೇ ನಂಬರ್ 87/13ರ ಜಮೀನಿನಲ್ಲಿ ಪೋಲಿಸರು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಮಧ್ಯಾಹ್ನ 2 ರಿಂದ 3 ಗಂಟೆಯವರೆಗೆ ನಿಪಿ-2ರ ಮಹಜರು ಮಾಡಿದರು ಎಂದರೆ ಸರಿಯಲ್ಲ. ಆಗ ಚಾಸಾ-1

ರವರು ಹಾಜರಿದ್ದು, ಸ್ಥಳ ತೋರಿಸಿದರು ಎಂದರೆ ಸರಿಯಲ್ಲ. ನನಗೆ ನಿಪಿ-2ರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. VKR ವಕೀಲರಿಂದಃ**

ಇಲ್ಲ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.